ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು):

ಅ) ಹೌದು

ಆ) 29,900 ಚದರ ಅಡಿಗಳು.

ಇ) ದೇವಸ್ಥಾನಕ್ಕೆ ಸೇರಿದ ಜಾಗದಲ್ಲಿ ಅಕ್ರಮವಾಗಿ ಅಂಗಡಿಗಳನ್ನು ಕಟ್ಟಿರುವುದಿಲ್ಲ. ಬೀದಿ ವ್ಯಾಪಾರಸ್ಥರು ಅಕ್ರಮವಾಗಿ ವ್ಯಾಪಾರ ಮಾಡುತ್ತಿದ್ದಾರೆ.

ಉ) ಪರಿಶೀಲನೆಯಲ್ಲಿದೆ.

ದೊಡ್ಡಬಸವಣ್ಣ ದೇವಸ್ಥಾನಕ್ಕೆ ಸೇರಿದ ಜಾಗವನ್ನು ಖಾಸಗಿ ಶಿಕ್ಷಣ ಸಂಸ್ಥೆಗೆ ನೀಡಿರುವುದು.

970- ಶ್ರೀ ಗುರುಪಾದಪ್ಪ, ನಾಗಮಾರನಹಳ್ಳಿ (ಜೆರಾದ್): ಮಾನ್ಯ ಕಂದಾಯ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದ ದೊಡ್ಡಬಸವಣ್ಣ ದೇವಸ್ಥಾನಕ್ಕೆ ಸೇರಿರುವ ಜಾಗದ ವಿಸ್ತೀರ್ಣವೆಷ್ಟು?

ಆ) ಇತಿಹಾಸ ಪ್ರಸಿದ್ಧವಾದ ಕಡಲೆಕಾಯಿ ಪರಿಷೆ ನಡೆಯುತ್ತಿದ್ದ ಈ ಅಮೂಲ್ಯವಾದ ಜಾಗವನ್ನು ಖಾಸಗಿ ಶಿಕ್ಷಣ ಸಂಸ್ಥೆಗೆ ನೀಡಿರುವುದು ನಿಜವಲ್ಲವೇ?

ಇ) ಹಾಗಿದ್ದಲ್ಲಿ ಯಾವಾಗ ಈ ಜಾಗವನ್ನು ಶಿಕ್ಷಣ ಸಂಸ್ಥೆಗೆ ನೀಡಲಾಗಿತ್ತು?

ಈ) ಯಾವ ಆಧಾರದ ಮೇಲೆ ಮತ್ತು ಎಷ್ಟು ಅವಧಿಗೆ ಈ ಜಾಗವನ್ನು ನೀಡಲಾಗಿದೆ?

ಉ) ಈ ಜಾಗವನ್ನು ಶಿಕ್ಷಣ ಸಂಸ್ಥೆಗೆ ನೀಡುವಾಗ ನೀತಿ ನಿಯಮಗಳನ್ನು ಗಾಳಿಗೆ ತೂರಿರುವುದು ನಿಜವೇ?

ಊ) ಅಮೂಲ್ಯವಾದ ಈ ಜಾಗವನ್ನು ಇಲಾಖೆಗೆ ವಾಪಸ್ಸು ಪಡೆದು ಕಡಲೆಕಾಯಿ ಪರಿಷೆಗೆ ಮೀಸಲಾಗಿಡುವುದರ ಮೂಲಕ ಜಾಗದ ಪಾವಿತ್ರತೆಯನ್ನು ಕಾಪಾಡಿಕೊಂಡು ಬರಲಾಗುವುದೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು):

ಅ) 3 ಎಕರೆ 10 ಗುಂಟೆ

ಆ) ಹೌದು ಭಾಗಶಃ ನೀಡಿರುತ್ತದೆ.

ಇ) ದಿನಾಂಕ: 22-8-1991 ಮತ್ತು 30-10-1992ರಲ್ಲಿ ಸರ್ಕಾರದ ಆದೇಶದಂತೆ ನೀಡಿರುತ್ತದೆ.

ಈ) ಗುತ್ತಿಗೆ ಆಧಾರದ ಮೇಲೆ 30 ವರ್ಷಗಳ ಅವಧಿಗೆ ನೀಡಲಾಗಿದೆ.

ಉ) ದೇವಸ್ಥಾನದ ಹಿತದೃಷ್ಟಿಯಿಂದ ಗುತ್ತಿಗೆ ಮಾರ್ಗಸೂಚಿಯನ್ನು ಸಡಿಲಿಸಲಾಗಿದೆ.

ಊ) ಸರ್ಕಾರ ಎಲ್ಲಾ ವಿಷಯಗಳನ್ನು ಪರಿಶೀಲಿಸಿಯೇ ಗುತ್ತಿಗೆ ನೀಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಮಿನಿ ವಿಧಾನಸೌಧಗಳು

986-ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈಗ ಮಿನಿ ವಿಧಾನಸೌಧಗಳನ್ನು ಸ್ಥಾಪಿಸಲು ಸರ್ಕಾರದವರು ಯೋಚಿಸುವರೇ?

ಆ) ಪ್ರಸ್ತುತ ಸಾಲಿನಲ್ಲಿ ಎಷ್ಟು ಮಿನಿ ವಿಧಾನಸೌಧಗಳನ್ನು ಸ್ಥಾಪಿಸಲಾಗುವುದು ಹಾಗೂ ಯಾವ ಯಾವ ಜಿಲ್ಲೆಗಳಲ್ಲಿ?

ಇ) ಬೀದರ್ ಜಿಲ್ಲೆಯ ಬಸವ ಕಲ್ಯಾಣ ತಾಲ್ಲೂಕಿನಲ್ಲಿ ಮಿನಿ ವಿಧಾನ ಸೌಧವನ್ನು ಕಟ್ಟಲು ಸರ್ಕಾರ ಕ್ರಮ ಕೈಗೊಂಡಿದೆಯೇ ಹಾಗಿದ್ದಲ್ಲಿ ಈ ವಿಷಯ ಯಾವ ಹಂತದಲ್ಲಿದೆ?

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು):

ಅ) ಇಲ್ಲ.

ಆ) ಇಲ್ಲ.

ಇ) ಪ್ರಶ್ನೆಗಳಿಗೆ 1 ಮತ್ತು 2ಕ್ಕೆ ಉತ್ತರ ನೀಡಿರುವುದರಿಂದ ಈ ಪ್ರಶ್ನೆಗೆ ಉತ್ತರ ನೀಡುವ ಪ್ರಮೇಯ ಇರುವುದಿಲ್ಲ.

ಬೇಲೂರು ಪಟ್ಟಣದಲ್ಲಿ ಬಸ್ ನಿಲ್ದಾಣ ನಿರ್ಮಾಣ.

844-ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಬೇಲೂರು): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೇಲೂರು ಪಟ್ಟಣದಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಜಗತ್‌ವಿಖ್ಯಾತವಾದ ಪಟ್ಟಣದಲ್ಲಿ ನಿವೇಶನವಿದ್ದರೂ ಬಸ್ ನಿಲ್ದಾಣ ನಿರ್ಮಿಸಲು ಸರ್ಕಾರ ವಿಳಂಬ ಮಾಡುತ್ತಿರುವ ಕಾರಣವೇನು?

ಇ) ಹಾಗೂ ಎಂದು ನಿರ್ಮಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು).

ಅ) ಬಸ್ ನಿಲ್ದಾಣವನ್ನು ನಿರ್ಮಿಸಲು ಸೂಕ್ತ ನಿವೇಶನವು ಲಭ್ಯವಾಗಿಲ್ಲದ ಕಾರಣ ಇದು ಇತ್ಯರ್ಥವಾಗದೆ ಉಳಿದಿದೆ.

ಆ) ಕೇಳಿದಂತಹ ನಿವೇಶನವನ್ನು ಪುರಸಭೆಯು ಹಸ್ತಾಂತರಿಸಿರುವುದಿಲ್ಲ ಮತ್ತು ಅದರ ಮೌಲ್ಯವನ್ನು ಅತಿ ಹೆಚ್ಚಿನ ದರವಾದ ರೂ. 15 ಲಕ್ಷಗಳ ಜೊತೆಗೆ ಸದರಿ ನಿವೇಶನದಲ್ಲಿರುವ ಕಟ್ಟಡಕ್ಕೆ ಲೋಕೋಪಯೋಗಿ ಇಲಾಖೆಯು ನಿರ್ಧರಿಸುವ ಮೌಲ್ಯವನ್ನೂ ಸಹ ಕೇಳುತ್ತಿದೆ.